**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು, ಜೆ.ಎಂ.ಎಫ್.ಸಿ./ಎಂ.ಎ.ಸಿ.ಟಿ. ಇವರ ನ್ಯಾಯಾಲಯ, ಮುಧೋಳ**
**ಇಂದು ದಿನಾಂಕ 02.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ 3 ರವರ ಪರ ವಕೀಲರಾದ ಶ್ರೀ ಎಸ್ ಎಸ್ ಜೆ ರವರ ಪರವಾಗಿಃ**

ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುವೆನು. ಈ ಅಪಘಾತ ದಿಃ 25.04.2021 ರಂದು ಆಗಿರುವುದು. ಈ ಅಪಘಾತವಾದ ಒಂದು ವರ್ಷ ದ ನಂತರ ಈ ಪರಿಹಾರ ಅರ್ಜಿಯನ್ನು ದಾಖಲು ಮಾಡಿರುವೆನು. ಈ ಅಪಘಾತವನ್ನು ಸಂತೋಷ ಎಂಬುವವನು ಮಾಡಿರುವನು. ಈ ಅರ್ಜಿಯನ್ನು ಸಂತೋಷ , ಶಿವಕುಮಾರ ಮತ್ತು ಆ ವಾಹನದ ಮಾಲೀಕನ ವಿರುದ್ಧ ದಾಖಲು ಮಾಡಿರುವೆನು. ಹಲಗತ್ತಿ ಯಿಂದ ರಾಮದುರ್ಗಕ್ಕೆ ಹೋಗುವ ರಸ್ತೆಯ ಬಸವನಗುಡಿ ದೇವಸ್ಥಾನ ಹತ್ತಿರ ಆಗಿರುವುದು. ಈ ಅಪಘಾತಕ್ಕೆ ಸಂಬಂದಪಟ್ಟಂತೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುವೆನು. ಈ ಅಪಘಾತವಾದಾಗ ವಾಹನದ ಮೇಲೆ ನಾನು , ನನ್ನ ಸಹೋದರಿ ಮತ್ತು ಒಂದು ವರ್ಷ ದ ಮಗು ಒಟ್ಟು 3 ಜನರು ಪ್ರಯಾಣಿಸುತ್ತಿದ್ದೇವು.

2. ನಿಪಿ 6 ರ ಅಂತಿಮ ವರದಿಯಲ್ಲಿ ನನ್ನನ್ನು 2 ನೇ ಆರೋಪಿಯನ್ನಾಗಿ ಮಾಡಿರುವರು ಎಂದರೆ ಸರಿ . ನಾನು ಜೆಎಂಎಫ್ ಸಿ ನ್ಯಾಯಾಲಯದಲ್ಲಿ ತಪ್ಪನ್ನು ಒಪ್ಪಿಕೊಂಡು ದಂಡ ತುಂಬಿದ್ದೇನೆ ಎಂದರೆ ಸರಿ. ನಾನು ಚಾಲನ ಪರವಾನಿಗೆ ಪತ್ರ ಹೊಂದಿರುವುದಿಲ್ಲ ಆ ಕಾರಣಕ್ಕೆ ನಾನು ಆ ತಪ್ಪನ್ನು ಒಪ್ಪಿಕೊಂಡು ದಂಡ ತುಂಬಿರುವೆನು. ನನ್ನ ದವಡೆ ಹಲ್ಲು ಮುರಿದಿರುವುದು, ಬಲದವಡಿ ಕಟ್ಟಾಗಿರುವುದು, ಮೂಗಿನ ಮೇಲ್ಭಾಗದ ಮೂಳೆ ಮುರಿತ ಮತ್ತು ಕಣ್ಣಿಗೆ, ತಲೆಗೆ ಮತ್ತು ಶರೀರದ ಇತರೆ ಭಾಗಗಳಿಗೆ ಗಾಯಗಳು ಆಗಿದ್ದವು. ಆ ವೈದ್ಯಕೀಯ ರಿಪೋರ್ಟ್ ಗಳಲ್ಲಿ ಗಾಯದ ಗಾತ್ರದ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿರುವೆನು. ಈ ಸಂಗತಿ ನಾನು ಹೇಳಿ ಬರೆಸಿರುವುದಿಲ್ಲ.

3. ಎರಡು ದ್ವಿಚಕ್ರ ವಾಹನ ಗಳ ನಡುವೆ ಈ ಅಪಘಾತವಾಗಿರುವುದು. ನನ್ನ ದ್ವಿಚಕ್ರ ವಾಹನ ನೊಂದಣಿ ನಂ. ಕೆಎ-26-6151 ಮತ್ತು ಇನ್ನೊಂದು ದ್ವಿಚಕ್ರ ವಾಹನ ನೊಂದಣಿ ನಂ. ಕೆಎ-17 ಹೆಚ್ ಡಿ 0990 ಇರುವುದು. ಈ ವಾಹನದಿಂದ ಈ ಅಪಘಾತವಾಗಿರುವುದಿಲ್ಲ, ಪರಿಹಾರ ಹಣ ಪಡೆಯುವ ಸಲುವಾಗಿ ಈ ವ ಾಹನವನ್ನು ಈ ಅಪಘಾತದಲ್ಲಿ ಅಳವಡಿಸಿದ್ದೇವೆ ಎಂದರೆ ಸರಿಯಲ್ಲ. ಈ ಅಪಘಾತವಾದ ನಂತರ ನಾನು ಚಿಕಿತ್ಸೆಗಾಗಿ ರಾಮದುರ್ಗದ ಸರಕಾರಿ ಆಸ್ಪತ್ರೆಗೆ ದಾಖಲು ಅಗಿರುವೆನು. ಈ ಅರ್ಜಿಯಲ್ಲಿ ಹೇಳಿರುವಂತೆ ಯಾವುದೇ ಅಪಘಾತವಾಗಿರುವುದಿಲ್ಲ

ಆದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಟ್ಟಿ ಆಸ್ಪತ್ರೆಯಿಲ್ಲಿ ಚಿಕಿತ್ಸೆ ಪಡೆದಿರುವುದಾಗಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಲ್ಲಿ ಸಿಟಿ ಸ್ಕ್ಯಾನ್ ಎಕ್ಸ್ ರೇ ಮಾಡಿಸಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 6 ದಿನಗಳ ವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಅಪಘಾತವಾದಾಗ 19 ವರ್ಷಗಳು ಆದ ಬಗ್ಗೆ ಜನನ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ.

4. ನಾನು ಪ್ರತಿ ತಿಂಗಳು 20 ಸಾವಿರಗಳನ್ನು ಸಂಪಾದನೆ ಮಾಡುತ್ತಿದ್ದೆ ಎಂಬುದಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಜಮೀನಿನಲ್ಲಿ ಬೆಳೆಗಳನ್ನು ಬೆಳೆದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಜಮೀನು ಇದ್ದ ಬಗ್ಗೆಯೂ ಸಹ ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿರುವುದಿಲ್ಲ. ಈ ಅರ್ಜಿಯಲ್ಲಿ ಹೇಳಿರುವಂತೆ ಯಾವುದೇ ಅಪಘಾತವಾಗಿರಿರುವುದಿಲ್ಲ, ನಾನು ಗಾಯಗೊಂಡಿರ ುವುದಿಲ್ಲ ಆದರೂ ಸಹ ಎದುರುದಾರರ 1 ಮತ್ತು 2 ರವರ ವಾಹನದ ದ್ವಿಚಕ್ರ ವಾಹನ ಸವಾರನ ವಿರುದ್ದ ಸುಳ್ಳು ದೂರು ದಾಖಲು ಮಾಡಿ ಪೊಲೀಸ್ ರ ಜೊತೆ ಮೀಲಾಪಿಯಾಗಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿವಂತೆ ನೋಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ವೈದ್ಯಕೀಯ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ.,/ಎಂ ಎ ಸಿ ಟಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.07.03 10:31:10 +0530